3605

# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ

## ಬೆಂಗಳೂರು — 1

ಸಂ.ಶಿ.1/ಸಂ.ನೃ.ನಾ.ಶಾ/10/2008-09 ದಿನಾಂಕ:3/01/2009

<u>ಜ್ಞಾಪನಾ</u>

ವಿಷಯ:- ಸಂಗೀತ, ನೃತ್ಯ, ನಾಟಕ ಶಾಲೆಗಳ ಸ್ಥಳ ಪರಿಶೀಲನೆ / ತಪಾಸಣೆ ಬಗ್ಗೆ ಮಾರ್ಗಸೂಚಿ.

ಉಲ್ಲೇಖ:- ಸರ್ಕಾರಿ ಆದೇಶ ಸಂಖ್ಯೆ: ಇ 5490-91-ಇ.ಡಿ.ಎಸ್.147-50-8 ದಿನಾಂಕ:5/10/1951ರ ಶಿಕ್ಷಣ ಸಂಹಿತೆ ಭಾಗ-7, ನಿಯಮ- 36.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಸಂಗೀತ, ನೃತ್ಯ, ನಾಟಕ ಶಾಲೆಗಳನ್ನು ಪ್ರಾರಂಭಿಸಲು ಅವಕಾಶವಿದೆ. ಈ ಹಿಂದೆ ಈ ಶಾಲೆಗಳ ಆರಂಭ, ನಿಯಂತ್ರಣ ಮುಂತಾದ ಎಲ್ಲಾ ಮೇಲುಸ್ತುವಾರಿಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಭಾಗೀಯ ಸಹನಿರ್ದೇಶಕರು ನೋಡಿಕೊಳ್ಳುತ್ತಿದ್ದರು. ಪ್ರಸ್ತುತ ಎರಡು ಅಂದರೆ ಗುಲ್ಬರ್ಗಾ, ಬೆಂಗಳೂರು ವಿಭಾಗೀಯ ಸಹನಿರ್ದೇಶಕರ ಕಛೇರಿಗಳು ಆಯುಕ್ತರ ಕಛೇರಿಯಲ್ಲಿ ವಿಲೀನಗೊಂಡಿವೆ. ಹಾಗೂ ಆಡಳಿತಾತ್ಮಕ ಅಂಶಗಳನ್ನು ಸಹನಿರ್ದೇಶಕರಿಂದ ಬೇರೆ ಬೇರೆ ಅಧಿಕಾರಿಗಳಿಗೆ ವರ್ಗಾಯಿಸಲಾಗಿದೆ. ಈ ಹಿನ್ನಲೆಯಲ್ಲಿ ಈಗ ಸಂಗೀತ, ನೃತ್ಯ, ನಾಟಕ ಶಾಲೆಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಉಪನಿರ್ದೇಶಕರ ಕಛೇರಿಗಳಿಂದ ಮಾಡಿಸಿದಾಗ ಕೆಲವು ತೊಡಕುಗಳು ಉಂಟಾಗುತ್ತಿವೆ. ಇವುಗಳನ್ನು ನಿವಾರಿಸಿ ಸಂಗೀತ, ನೃತ್ಯ, ನಾಟಕ ಶಾಲೆಗಳು ನಿಯಮಿತವಾಗಿ ಸುಲಭವಾಗಿ ಕಡಿಮೆ ಅವಧಿಯಲ್ಲಿ ಪ್ರಾರಂಭವಾಗಲು, ಪ್ರಥಮ ಮಾನ್ಯತೆ ಪಡೆಯಲು, ಮಾನ್ಯತೆ ನವೀಕರಿಸಿಕೊಳ್ಳಲು ಅಧಿಕಾರಿಗಳಿಗೆ ತಪಾಸಣೆ, ಸ್ಥಳಪರಿಶೀಲನೆ/ಭೇಟಿ ಮುಂತಾದ ಆಡಳಿತಾತ್ಮಕ ಕಾರ್ಯನಡೆಸಲು ಸುಲಭ ಸಾಧ್ಯವಾಗುವುದು ಅಗತ್ಯವಾಗಿದೆ. ಆದುದರಿಂದ ಈ ಜ್ಞಾಪನಾ.

1).ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಯಾವುದೇ ನೋಂದಾಯಿತ ಸಂಸ್ಥೆ ತನ್ನ ಬೈಲಾದಲ್ಲಿ ಸಂಗೀತ, ನೃತ್ಯ, ನಾಟಕದ ಅಭಿವೃದ್ಧಿ, ಬೆಳೆಗೆ, ತರಬೇತಿ ಹಾಗೂ ಈ ವಿಷಯಗಳಲ್ಲಿ ಶಿಕ್ಷಣ ಅಂಶಗಳಲ್ಲಿ ಸೇರಿಸಿದ್ದರೆ ಅಂತಹ ಸಂಸ್ಥೆಗಳು ಸಂಗೀತ, ನೃತ್ಯ, ನಾಟಕ ವಿಷಯಗಳಿಗೆ ಯಾವುದಾದರೂ ಒಂದೇ ವಿಷಯದಲ್ಲಿ ಅಥವಾ ಎರಡು ವಿಷಯದಲ್ಲಿ ಅಥವಾ ಮೂರು ವಿಷಯದಲ್ಲಿ ಶಿಕ್ಷಣ ನೀಡುವ ಶಾಲೆಯನ್ನು ಪ್ರಾರಂಭಿಸಬಹುದಾಗಿದೆ.

2).ಯಾವುದೇ ಸಂಸ್ಥೆಯು ಇಂತಹ ಶಾಲೆ ಅಥವಾ ಶಾಲೆಗಳನ್ನು ಪ್ರಾರಂಭಿಸಲು ನಿಯಮಾನುಸಾರ ಅವಕಾಶವಿದೆ. ಸಂಗೀತ, ನೃತ್ಯ, ನಾಟಕ ಶಾಲೆಗಳು ವಿಶೇಷ ಶಾಲೆಗಳೆಂದು ಕರೆಯಲ್ಪಡುತ್ತವೆ. ಸಾಮಾನ್ಯ ಶಿಕ್ಷಣದ ಶಾಲೆಗಳಿಗಿಂತ ಇವು ಭಿನ್ನವಾಗಿದ್ದು ಕೆಲಸದ ಅವಧಿ ಬೇರೆಯಾಗಿರುತ್ತವೆ. ಸಾಮಾನ್ಯ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಮಕ್ಕಳು ಈ ವಿಶೇಷ ಶಿಕ್ಷಣ ಪಡೆಯಲು ಅನುಕೂಲವಾಗುವಂತೆ ಕೆಲಸದ ಅವಧಿ ಮಾಡಿಕೊಳ್ಳಬಹುದಾಗಿದೆ.

3).ತರಗತಿಗಳು ಜೂನಿಯರ್, ಸೀನಿಯರ್, ವಿದ್ವತ್ ಎಂದು ಸಂಗೀತ / ನೃತ್ಯ ವಿಷಯದಲ್ಲಿಯೂ ರಂಗಶಿಕ್ಷಣ ಡಿಪ್ಲೊಮೊ ಎಂದು ನಾಟಕ ವಿಷಯದಲ್ಲಿರುತ್ತವೆ.

4).ಸಂಗೀತದಲ್ಲಿ ಕರ್ನಾಟಕಸಂಗೀತ ಹಾಗೂ ಹಿಂದೂಸ್ಥಾನಿಸಂಗೀತ ಎಂಬ ಎರಡು ಶೈಲಿಗಳು. ಹಾಡುಗಾರಿಕೆ, ಪಿಟೀಲು, ವೀಣೆ, ನಾಗಸ್ವರ, ಕ್ಲಾರಿಯೋನೆಟ್ ಮುಂತಾದ ವಾದ್ಯಗಳು

ಕರ್ನಾಟಕ/ಹಿಂದುಸ್ಥಾನಿ ಸಂಗೀತಗಳಿಗೆ ಸಾಮಾನ್ಯವಾಗಿದ್ದು ಹಿಂದುಸ್ಥಾನಿ ಸಂಗೀತದಲ್ಲಿ ಮಾತ್ರ ಹಾರ್ಮೋನಿಯಂ ಅವಕಾಶವಿದೆ. ತಬಲ, ಮೃದಂಗ, ಢೋಲು, ಡೋಲಕ್, ಘಟ, ಮೋರ್ಚಿಂಗ್ ಮುಂತಾದ ತಾಳವಾದ್ಯಗಳು ಈ ಎಲ್ಲಾ ಪ್ರಕಾರಗಳಲ್ಲಿಯೂ ಜೂನಿಯರ್, ಸೀನಿಯರ್, ವಿದ್ವತ್ ತರಗತಿಗಳನ್ನು ನಡೆಸಬಹುದಾಗಿದೆ.

5). ನೃತ್ಯದಲ್ಲಿ ಭರತನಾಟ್ಯ, ಕಥಕ್, ಕಥಕಳಿ ಎಂಬ 03 ಪ್ರಕಾರಗಳಿದ್ದು ಇವುಗಳಲ್ಲಿಯೂ ಸಹ ಜೂನಿಯರ್, ಸೀನಿಯರ್, ವಿದ್ವತ್ ತರಗತಿಗಳನ್ನು ನಡೆಸಬಹುದಾಗಿದೆ.

6). ಮೇಲಿನ ಸಂಗೀತ ಹಾಗೂ ನೃತ್ಯ ಪ್ರಕಾರಗಳಲ್ಲಿ ಯಾವುದಾದರೂ ಒಂದು ಅಥವಾ ಎರಡು ಅಥವಾ ಎಲ್ಲಾ ವಿಷಯಗಳಲ್ಲಿ ಸಂಸ್ಥೆಯು ಆರಿಸಿಕೊಳ್ಳಬಹುದಾದಷ್ಟು ಪ್ರಕಾರಗಳಲ್ಲಿ ತರಗತಿಗಳನ್ನು ನಡೆಸಬಹುದಾಗಿದೆ.

7). ಕೋರ್ಸಿನ ಅವಧಿಗಳು ಸಂಗೀತ ಮತ್ತು ನೃತ್ಯಕ್ಕೆ ಒಂದೇ ರೀತಿ ಇದೆ. ಜೂನಿಯರ್ – 02 ವರ್ಷ, ಸೀನಿಯರ್ – 03 ವರ್ಷ, ವಿದ್ವತ್ ಪೂರ್ವ – 03 ವರ್ಷ, ವಿದ್ವತ್ ಅಂತಿಮ – 01 ವರ್ಷ. ಈ ಶಾಲೆಗಳಿಗೆ ಪ್ರವೇಶ ಪಡೆಯುವಾಗ ಜೂನಿಯರ್‌ನಿಂದ ಪ್ರಾರಂಭಿಸಬೇಕು. ಪ್ರವೇಶಕ್ಕೆ ಯಾವುದೇ ಅರ್ಹತೆ ಅಗತ್ಯವಿಲ್ಲ. ಜೂನಿಯರ್ ನಂತರದ ತರಗತಿಗಳಿಗೆ ಪ್ರವೇಶ ಪಡೆಯುವಾಗ ಹಿಂದಿನ ಪರೀಕ್ಷೆ ಪಾಸಾಗಿರುವುದು ಕಡ್ಡಾಯ. ನಾಟಕ ಶಾಲೆಗಳಿಗೆ ಪ್ರವೇಶ ಪಡೆಯಲು ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಪಾಸಾಗಿರಬೇಕು. ಕೋರ್ಸಿನ ಹೆಸರು ರಂಗಶಿಕ್ಷಣ ಡಿಪ್ಲೊಮೊ, ಅವಧಿ–02 ವರ್ಷ.

8). ಸಂಗೀತ, ನೃತ್ಯ ತರಗತಿಗಳಲ್ಲಿ ಪ್ರತಿಯೊಂದು ತರಗತಿಯಲ್ಲಿ ಕನಿಷ್ಠ 10ಕ್ಕಿಂತ ಮಕ್ಕಳ ಸಂಖ್ಯೆ ಕಡಿಮೆ ಇರಬಾರದು. ನಾಟಕ ತರಗತಿಗಳಿಗೆ 01 ತರಗತಿಗೆ ಗರಿಷ್ಠ 30 ವಿದ್ಯಾರ್ಥಿಗಳು ಇರಬೇಕು. ಮೊದಲ ವರ್ಷ ಡಿಪ್ಲೊಮೊ ತರಗತಿಯಲ್ಲಿ ಕನಿಷ್ಠ 15 ವಿದ್ಯಾರ್ಥಿಗಳು ಇರುವುದು ಕಡ್ಡಾಯ. ಸಂಗೀತ, ನೃತ್ಯ ಶಾಲೆಗಳು ಆಯಾ ಪ್ರದೇಶಕ್ಕನುಗುಣವಾಗಿ ದಿನದಲ್ಲಿ ಕನಿಷ್ಠ 04 ಗಂಟೆಗಳು ಬೋಧನೆ ನಡೆಸಬೇಕು. ನಾಟಕ ಶಾಲೆಗಳು ದಿನದಲ್ಲಿ 05 ಗಂಟೆ ಪಾಠ ಬೋಧನೆ ನಡೆಸಬೇಕು. ಮೂಲಭೂತ ಸೌಕರ್ಯಗಳು ಸಾಮಾನ್ಯ ಶಾಲೆಯಂತೆಯೇ ಕಟ್ಟಡ, ಗ್ರಂಥಾಲಯ, ಪಾಠೋಪಕರಣ, ಶಿಕ್ಷಣೋಪಕರಣ, ವಾದ್ಯಗಳು ಮುಂತಾದುವುಗಳನ್ನು ಅಗತ್ಯಕ್ಕೆ ತಕ್ಕಂತೆ ಹೊಂದಿರಬೇಕು. ಇನ್ನುಳಿದ ವಿಷಯಗಳಲ್ಲಿ ಅನುದಾನರಹಿತ ಖಾಸಗಿ ಶಾಲೆಗಳಂತೆಯೇ ಇವುಗಳನ್ನು ಸಹ ಪರಿಗಣಿಸಬಹುದು.

9). ಪಾಠ ಬೋಧನೆ ಮಾಡಲು ಸಂಗೀತ, ನೃತ್ಯದಲ್ಲಿ ಎಸ್.ಎಸ್.ಎಲ್.ಸಿ ಜೊತೆಗೆ ಕನಿಷ್ಠ ಸೀನಿಯರ್ ಪಾಸಾದವರನ್ನು ಜೂನಿಯರ್ ತರಗತಿಗಳಿಗೂ ವಿದ್ವತ್ ಹಾಗೂ ಸಮಾನಾಂತರ ಪರೀಕ್ಷೆಯಲ್ಲಿ ತೇರ್ಗಡೆಯಾದವರನ್ನು ಉನ್ನತ ತರಗತಿಗಳ ಪಾಠ ಬೋಧನೆಯ ಶಿಕ್ಷಕರನ್ನಾಗಿ ನೇಮಕ ಮಾಡಿಕೊಳ್ಳಬೇಕು. ನಾಟಕ ಡಿಪ್ಲೊಮೊ ತರಗತಿ ಬೋಧಿಸಲು ನಾಟಕ ಡಿಪ್ಲೊಮೊ ತೇರ್ಗಡೆಯಾಗಿ ಸಾಕಷ್ಟು ಅನುಭವ ಪಡೆದವರನ್ನು ಅಥವಾ ರಂಗಶಿಕ್ಷಣದಲ್ಲಿ ಉನ್ನತ ವಿದ್ಯಾರ್ಹತೆಯುಳ್ಳವರನ್ನು ಶಿಕ್ಷಕರನ್ನಾಗಿ ನೇಮಕ ಮಾಡಿಕೊಳ್ಳಬೇಕು.

ನಿರ್ದೇಶಕರು (ಪ್ರೌಢ ಶಿಕ್ಷಣ)

ಪ್ರತಿಗಳು ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.

1). ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ರವರು.
2). ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು.
3). ಕಚೇರಿ ಪ್ರತಿ.

ಕರ್ನಾಟಕ ಸರ್ಕಾರದ ಖಾಸಗಿ ಆಡಳಿತ ಮಂಡಳಿಯವರಿಂದ ಸಂಗೀತ, ನೃತ್ಯ, ಮತ್ತು ನಾಟಕ ಶಿಕ್ಷಣ ಶಾಲೆ ಪ್ರಾರಂಭಿಸಲು ಅರ್ಜಿ ನಮೂನೆ.

1. ಶಾಲೆಯನ್ನು ತೆರೆಯಬೇಕೆಂದಿರುವ ಸಂಘ ಅಥವಾ ಸಂಸ್ಥೆಯ ಹೆಸರು. :

2. ಸಂಸ್ಥೆಯನ್ನು ನೋಂದಣಿ ಮಾಡಿದ ದಿನಾಂಕ. :

3. ಸಂಸ್ಥೆಯ ಹೆಸರು . :

4. ಆಡಳಿತ ಮಂಡಳಿ ಮತ್ತು ರಚನೆ. :

5. ಸಂಸ್ಥೆಯು ಕೇವಲ ಇದೊಂದೆ ಶಾಲೆಯನ್ನು ಪ್ರಾರಂಭಿಸುತ್ತಿದ್ದಾರೆಯೇ ? ಅಥವಾ ಬೇರೆ ಸಂಸ್ಥೆಯನ್ನು ಈ ಸಂಸ್ಥೆಯಿಂದ ಪ್ರಾರಂಭಿಸಿದ್ದರೆ ಅವರ ಹೆಸರನ್ನು ತಿಳಿಸುವುದು. :

6. ಕಾರ್ಯದರ್ಶಿ ಮತ್ತು ವ್ಯವಹಾರಗಾರರ ಹೆಸರು ಮತ್ತು ವಿಳಾಸ . :

7. ಪ್ರದೇಶದಲ್ಲಿರುವ ವಿದ್ಯಾಭ್ಯಾಸದ ಅವಶ್ಯಕತೆ . :

8. ಪ್ರದೇಶದಲ್ಲಿ ಶಾಲೆ ಇರುವ ಸಂಸ್ಥೆಯ ಹೆಸರು. :

9. ಈ ಸಂಸ್ಥೆಯು ಶಾಲೆಯನ್ನು ತೆರೆಯುವುದರಿಂದ ಇತರೆ ಯಾವುದಾದರು ಶಾಲೆ ಅನುಮತಿ ಪಡೆದ ಸಂಸ್ಥೆಯು ಇರುವುದಕ್ಕೆ ತೊಂದರೆ ಮಾಡುತ್ತಿದೆಯೇ ? ಮತ್ತು ಅದರ ದೂರ. :

10. ನೀಡಬೇಕೆಂದಿರುವ ಬೋಧನಾ ವಿಧಾನ :

11. ಪ್ರಾರಂಭಿಸಲು ಉದ್ದೇಶಿಸಿರುವ ತರಗತಿಗಳು
ಎ. ಶಾಲೆಯನ್ನು ತೆಗೆದಾಗ ಸಿಗಬಹುದಾದ ವಿದ್ಯಾರ್ಥಿಗಳ ಸಂಖ್ಯೆ (ತರಗತಿಯ ವಿವರದಂತೆ). :

12. ಸಂಸ್ಥೆಯ ಹಣಕಾಸಿನ ಪರಿಸ್ಥಿತಿ :

ಎ. ಸಾಕಷ್ಟು ಹಣ :

ಬಿ. ಬೇರೆ ಮೂಲಗಳಿಂದ ಆದಾಯ

ಸಿ. ನಿಗದಿತ ಹಣವನ್ನು ಯಾವ ರೀತಿ ಕಟ್ಟುತ್ತೀರ :

13. ಸಂಸ್ಥೆಯು ಸರ್ಕಾರದಿಂದ ಹಣಕಾಸಿನ ಸಹಾಯ ಇಲ್ಲದೆ ಶಾಲೆಯನ್ನು ನಡೆಸುತ್ತದೆಯೇ ? :

14. ಸ್ಥಳಾವಕಾಶ ಮತ್ತು ಶೌಚಾಲಯ

ಎ. ಶಾಲೆಯ ಕಟ್ಟಡದ ಪೂರ್ಣ ವಿಸ್ತೀರ್ಣ

ಬಿ. ಆಟದ ಮೈದಾನ

ಸಿ. ಒಟ್ಟು ತರಗತಿಯ ಕೊಠಡಿಗಳು ಪ್ರತಿಯೊಂದರ ವಿಸ್ತೀರ್ಣ ಅಳತೆ ಮತ್ತು ಎಷ್ಟು ವಿದ್ಯಾರ್ಥಿಗಳಿಗೆ ಅಲ್ಲಿ ಪಾಠದ ವ್ಯವಸ್ಥೆ ಮಾಡಬಹುದು. ಶೌಚಾಲಯದ ವ್ಯವಸ್ಥೆ, ನೀರಿನ ವ್ಯವಸ್ಥೆ ಇತ್ಯಾದಿ. :

15. ಪಾಠೋಪಕರಣಗಳು (ಪೀಠೋಪಕರಣ ಬೋಧನ ಪೀಠೋಪಕರಣಗಳು ಪ್ರತಿಯೊಂದು ತರಗತಿ ಪ್ರತ್ಯೇಕ ವಿವರದಂತೆ). :

16. ಅಭಿಪ್ರಾಯ :

ಸ್ಥಳ:

ದಿನಾಂಕ:

...ಗೀತ ನೃತ್ಯ ಮತ್ತು ನಾಟಕ ಶಾಲೆಗೆ ಅನುಮತಿ ಬಗ್ಗೆ ಜಿಲ್ಲಾ ಉಪನಿರ್ದೇಶಕರು(ಆಡಳಿತ) ...ಚೇರಿಯ ಮುಖಾಂತರ ಈ ಕಛೇರಿಗೆ ಒಪ್ಪಿಸಬೇಕಾದ ಮಾಹಿತಿಗಳು.

1). ಸ್ಥಳಪರಿಶೀಲನೆ ನಡೆಸಿದ ಅಧಿಕಾರಿಯ ವರದಿ.

2). ನಮೂನೆ 1ರಲ್ಲಿ ಅರ್ಜಿ.

3). ರಿಜಿಸ್ಟ್ರಾರ್ ಆಫ್ ಸೊಸೈಟಿಯಲ್ಲಿ ನೊಂದಾಯಿಸಿರುವ ಪ್ರತಿ.

4). ಸಂಸ್ಥೆ ನಿವೇಶನದ ಪತ್ರ

5). ಆಡಳಿತ ಮಂಡಳಿ ಯಾದಿ.

6). ಆಡಳಿತ ಮಂಡಳಿಯ ಒಂದು ಕುಟುಂಬದ ಒಬ್ಬರಿಗಿಂತ ಹೆಚ್ಚು ಸದಸ್ಯರು ಇರುವುದಿಲ್ಲ ಹಾಗೂ ಯಾವುದೇ ಸರ್ಕಾರಿ ನೌಕರರು ಇರುವುದಿಲ್ಲ ಎಂದು ಘೋಷಣೆಯನ್ನು ಸಂಸ್ಥೆ ಕಾರ್ಯದರ್ಶಿ ನೀಡಿದ್ದು ಉಪನಿರ್ದೇಶಕರು ದೃಢೀಕರಿಸಬೇಕು.

7). ಶಿಕ್ಷಣ ಸಂಹಿತೆಯ ಎಲ್ಲಾ ನಿಯಮಗಳನ್ನು ಪಾಲಿಸುವುದಾಗಿ ತಿಳಿಸಿ ಠರಾವು ಮಾಡಿದ್ದು ಸದರಿ ಠರಾವಿಗೆ ಎಲ್ಲಾ ಸದಸ್ಯರು ಸಹಿ ಮಾಡಿರಬೇಕು.

8). ಸದರಿ ಶಾಲೆಯನ್ನು ನಡೆಸುವಲ್ಲಿ ಬೇರೆ ಇನ್ಯಾವುದೇ ಸಂಗೀತ, ನೃತ್ಯ ಮತ್ತು ನಾಟಕ ಶಾಲೆಗಳು ಇರುವುದಿಲ್ಲವೆಂಬ ಬಗ್ಗೆ ಮಾಹಿತಿ ಅಥವಾ ಶಾಲೆಗಳು ಇದ್ದಲ್ಲಿ ಅವುಗಳ ಪೂರ್ಣ ವಿಳಾಸ ಮತ್ತು ಅಂತರ ನೀಡತಕ್ಕದ್ದು.

9). ಆರ್ಥಿಕವಾಗಿ ಸಂಸ್ಥೆಯವರು ಉತ್ತಮವಾಗಿದ್ದಲ್ಲಿ ದಾಖಲೆಯೊಂದಿಗೆ ಒದಗಿಸುವುದು.

10). ಕಟ್ಟಡ ನಕ್ಷೆ ನೀಡತಕ್ಕದ್ದು

11). ಬಾಡಿಗೆದಾರರು ನೀಡಿದ ಒಪ್ಪಿಗೆ ಪತ್ರ.

12). ಸ್ಥಳಾವಕಾಶ ಮಾಹಿತಿ.

13). ಪೀಠೋಪಕರಣ ಮಾಹಿತಿ

14). ವಾದ್ಯೋಪಕರಣ ಮಾಹಿತಿ.

15). ಶಾಲೆಯ ವೇಳಾ ಪಟ್ಟಿ.

16). ಶಾಲೆಯ ವಿಳಾಸ.

17). ಸಂಸ್ಥೆಯ ವಿಳಾಸ.

18). 20 ರೂ ಛಾಪಾ ಕಾಗದದಲ್ಲಿ ಶಾಶ್ವತವಾಗಿ ಇಲಾಖೆಯಿಂದ ಯಾವುದೇ ಅನುದಾನ ಬಯಸದೆ ಶಾಲೆಯನ್ನು ನಡೆಸುವುದಾಗಿ ಘೋಷಣಾ ಪತ್ರ .

19). ಇಲಾಖಾ ಪಠ್ಯ ಕ್ರಮವನ್ನು ಬೋಧಿಸುವುದಾಗಿ ಮುಚ್ಚಳಿಕೆ.

20). ಹಾಗೂ ಎಲ್ಲಾ ಕಾಗದ ಪತ್ರಗಳನ್ನು ಸಂಸ್ಥೆಯ ಕಾರ್ಯದರ್ಶಿ ಮತ್ತು ಉಪನಿರ್ದೇಶಕರವರ ಕಛೇರಿಯಿಂದ ದೃಢೀಕರಿಸತಕ್ಕದ್ದು. ಹಾಗೂ ಉಪನಿರ್ದೇಶಕರು ಮುಖ್ಯ ಪತ್ರದಲ್ಲಿ ಸ್ಪಷ್ಟವಾದ ಶಿಫಾರಸ್ಸು ಮಾಡಿರಬೇಕು.